**ವಿಧಾನ ಪರಿಷತ್‌ನ ಮಾನ್ಯ ಸದಸ್ಯರಾದ ಶ್ರೀ ಎನ್. ರವಿಕುಮಾರ್ ರವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

*******

**ಪ್ರಶ್ನೆ:**

ಬೆಂಗಳೂರು ನಗರದ ಮಾರತ್ ಹಳ್ಳಿ, ಜಕ್ಕಸಂದ್ರ, ಸರ್ಜಾಪುರ, ಬೆಳ್ಳಂದೂರು, ದೇವರ ಬೀಸನಹಳ್ಳಿ, ಕಾಡುಬೀಸನಹಳ್ಳಿ ಮುಂತಾದ ಕಡೆಗಳಲ್ಲಿ ಅಕ್ರಮವಾಗಿ ದೇಶ ಪ್ರವೇಶಿಸಿ ವಾಸಿಸುತ್ತಿರುವ ಬಾಂಗ್ಲಾದೇಶಿಯರ ಕ್ಯಾಂಪ್‌ಗಳಿದ್ದು ಪ್ರತಿಯೊಂದು ಕ್ಯಾಂಪ್‌ನಲ್ಲಿ 3000 ದಿಂದ 4000ದ ವರೆಗೆ ಅಕ್ರಮವಾಗಿ ದೇಶವನ್ನು ಪ್ರವೇಶಿಸಿರುವ ರೋಹಿಂಗ್ಯರು ಸೇರಿದಂತೆ ಬಾಂಗ್ಲಾ ದೇಶಿಯರು ವಾಸಿಸುತ್ತಿರುವುದು ಆಘಾತದಾಯಕ ವಿಷಯವಾಗಿದೆ. ನಮ್ಮ ರಾಜ್ಯ/ನಗರದ ಕನ್ನಡಿಗರ ಸುರಕ್ಷತೆಯ ಮೇಲೆ ಗಂಭೀರವಾದ ಭಯೋತ್ಪಾದನೆಯ ನೆರಳಿನಲ್ಲಿ ಬದುಕಬೇಕಾಗಿರುವುದು ಚಿಂತಿಸಬೇಕಾದ ವಿಷಯ. ಈ ಅಕ್ರಮ ರೋಹಿಂಗ್ಯರು ಮತ್ತು ಬಾಂಗ್ಲಾದೇಶಿಯರು ಬೆಂಗಳೂರಿನಲ್ಲಿ ವಾಸಿಸುತ್ತಿರುವುದರಿಂದ ಆಗುತ್ತಿರುವ ಆರ್ಥಿಕ, ಸಾಮಾಜಿಕ, ಕನ್ನಡಿಗರ ಭದ್ರತೆಯ ಮೇಲಿನ ಪರಿಣಾಮಗಳ ಕುರಿತು.

**ಉತ್ತರ:**

ಬೆಂಗಳೂರು ನಗರದ ಮಾರತ್ ಹಳ್ಳಿ, ಜಕ್ಕಸಂದ್ರ, ಸರ್ಜಾಪುರ, ಬೆಳ್ಳಂದೂರು, ದೇವರ ಬೀಸನಹಳ್ಳಿ, ಕಾಡುಬೀಸನಹಳ್ಳಿ ಮುಂತಾದ ಕಡೆಗಳಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಬಾಂಗ್ಲಾದೇಶಿಯರ ಕ್ಯಾಂಪ್‌ಗಳಿದ್ದು ಪ್ರತಿಯೊಂದು ಕ್ಯಾಂಪ್‌ನಲ್ಲಿ 3000 ದಿಂದ 4000ದ ವರೆಗೆ ಅಕ್ರಮವಾಗಿ ಬಾಂಗ್ಲಾದೇಶಿಯರು ಹಾಗೂ ರೋಹಿಂಗ್ಯಾಗಳು ವಾಸವಾಗಿರುವ ಬಗ್ಗೆ ಆರೋಪಗಳು ಕೇಳಿ ಬಂದ ಕಾರಣ ಈ ಕ್ಯಾಂಪ್‌ಗಳಿಗೆ ಕಂದಾಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳ ಸಹಯೋಗದೊಂದಿಗೆ ಭೇಟಿ ಮಾಡಿ ಪರಿಶೀಲಿಸಲಾಗಿ ಯಾವುದೇ ಅಕ್ರಮ ಬಾಂಗ್ಲಾದೇಶಿಯರು ನೆಲೆಸಿರುವುದು ಕಂಡುಬಂದಿರುವುದಿಲ್ಲ.

ಬೆಂಗಳೂರಿನ ಈಶಾನ್ಯ ವಿಭಾಗದಲ್ಲಿ 120 ಜನ ರೋಹಿಂಗ್ಯಾ ವಲಸಿಗರು ವಾಸವಿದ್ದು, ಇವರುಗಳು ಚಿಂದಿ ಆಯುವ ಕೆಲಸ ಮಾಡಿಕೊಂಡಿದ್ದು, ಇಲ್ಲಿಯವರೆಗೂ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿರುವುದಿಲ್ಲ. ಇವರುಗಳ ಚಲನವಲನದ ಮೇಲೆ ಸೂಕ್ತ ನಿಗಾವಹಿಸಲಾಗಿರುತ್ತದೆ ಹಾಗೂ ಇವರು ಪಶ್ಚಿಮ ಬಂಗಾಳ ಹಾಗೂ ಇತರ ರಾಜ್ಯಗಳಿಂದ ಬಂದು ಕ್ಯಾಂಪ್‌ಗಳನ್ನು ನಿರ್ಮಿಸಿಕೊಂಡಿರುತ್ತಾರೆ.

ಸಿಸಿಬಿ ಪೊಲೀಸ್ ಠಾಣೆಯಲ್ಲಿ ಕ್ರೈಂ ನಂ. 11/2024 ಕಲಂ 370, 465, 471, 468, 120(ಬಿ) ಐ.ಪಿ.ಸಿ & 14(ಎ) ಫಾರಿನರ್ಸ್ ಆಕ್ಟ್ 1946 ರೀತ್ಯಾ ಪ್ರಕರಣ ದಾಖಲಿಸಿ 4 ಜನ ಬಾಂಗ್ಲಾದೇಶಿಯರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; ಪ್ರಕರಣ ತನಿಖಾ ಹಂತದಲ್ಲಿರುತ್ತದೆ.

ಸುದ್ದುಗುಂಟೆಪಾಳ್ಯ ಪೊಲೀಸ್ ಠಾಣಾ ಮೊಕ್ಕದ್ದಮೆ ಸಂಖ್ಯೆ: 134/2024 ಕಲಂ 14(ಎ), 14(ಬಿ) ಆಫ್ ಫಾರಿನರ್ಸ್ ಆಕ್ಟ್ ಕಲಂ 12(1)(ಎ)(ಬಿ) ಪಾಸ್‌ಪೋರ್ಟ್ ಆಕ್ಟ್ ಕಲಂ 465, 467, 468, 120(ಬಿ) ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ 4 ಜನ ಬಾಂಗ್ಲಾದೇಶಿಯರ ವಿರುದ್ಧ ಕ್ರಮ ಕೈಗೊಂಡಿದ್ದು, ಪ್ರಕರಣ ತನಿಖಾ ಹಂತದಲ್ಲಿರುತ್ತದೆ.

ವಿಲ್ಸನ್ ಗಾರ್ಡನ್ ಪೊಲೀಸ್ ಠಾಣಾ ಮೊಕ್ಕದ್ದಮೆ ಸಂಖ್ಯೆ: 99/2024 ಕಲಂ 14 ಆಫ್ ಫಾರಿನರ್ಸ್ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿ ಒಬ್ಬ ಬಾಂಗ್ಲಾ ದೇಶಿಯನ ವಿರುದ್ಧ ಕ್ರಮ ಕೈಗೊಂಡಿದ್ದು ಪ್ರಕರಣ ತನಿಖಾ ಹಂತದಲ್ಲಿರುತ್ತದೆ.

ಪೊಲೀಸ್ ಠಾಣಾ ಮಟ್ಟದಲ್ಲಿ ಬಾಂಗ್ಲಾದೇಶಿಯರು ಮತ್ತು ರೋಹಿಂಗ್ಯಾಗಳ ಬಗ್ಗೆ ಹೆಚ್ಚಿನ ಕಣ್ಗಾವಲು ಇರಿಸಿದ್ದು, ಠಾಣಾಧಿಕಾರಿಗಳು ರೋಹಿಂಗ್ಯಾಗಳ ಕ್ಯಾಂಪ್‌ಗಳಿಗೆ ಭೇಟಿ ಮಾಡಲು ಸೂಚಿಸಲಾಗಿದೆ. ಬಾಂಗ್ಲಾದೇಶಿಯರು ಮತ್ತು ರೋಹಿಂಗ್ಯಾಗಳು ಕೆಲಸ ಮಾಡುವ ಸ್ಥಳಗಳ ಮಾಲೀಕರುಗಳಿಗೆ ವಿದೇಶಿಯರ ಪೂರ್ವಾಪರಗಳನ್ನು ತಿಳಿದುಕೊಳ್ಳುವಂತೆ ಮತ್ತು ದಾಖಲೆಗಳನ್ನು ಸಂಗ್ರಹಿಸಲು ಸೂಚಿಸಲಾಗಿರುತ್ತದೆ. ರಾತ್ರಿ ಪಾಳಿಯ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಗಸ್ತು ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗಿದೆ. ಈ ಕ್ರಮಗಳಿಂದ ಸಾರ್ವಜನಿಕರ ಸುಭದ್ರತೆಯನ್ನು ಕಾಪಾಡಲಾಗುತ್ತಿದೆ.

ಸಂಖ್ಯೆ: ಒಇ 265 ಪಿಎಂಎಸ್ 2024

(ಡಾ: ಜಿ. ಪರಮೇಶ್ವರ)

ಗೃಹ ಸಚಿವರು